## ಋತು ಚಕ್ರ

ಪ್ರೌಢಾವಸ್ಥೆ ಎಂಬುದು ಬಾಲ್ಯದಿಂದ ವಯಸ್ಕರಾಗುವ ಹಂತವಾಗಿದ್ದು ಮತ್ತು ಇದನ್ನು ಮಹಿಳೆಯಲ್ಲಿ 8 ರಿಂದ 16 ವರ್ಷ ವಯಸ್ಸಿನಲ್ಲಿ ಕಾಣಬಹುದು.

ಪ್ರೌಢಾವಸ್ಥೆಯ ಮಹಿಳೆಯು ಋತು ಚಕ್ರವನ್ನು ಹೊಂದಿರುತ್ತಾಳೆ ಮತ್ತು ಈ ಋತುಚಕ್ರವು 25 ರಿಂದ 30 ದಿನಗಳಿಗೊಮ್ಮೆ ಆಗುತ್ತದೆ. ಸಾಮಾನ್ಯವಾಗಿ ಈ ಋತುಚಕ್ರವು 28 ದಿನಗಳಿಗೊಮ್ಮೆ ಬರುತ್ತದೆ. ಮಹಿಳೆಯರ ದೇಹದಲ್ಲಿ ಪ್ರೌಢಾವಸ್ಥೆಯಿಂದ ಶುರುವಾಗಿ ಈ ಋತು ಚಕ್ರವು ಮುಟ್ಟು ನಿಲ್ಲುವ ಸಮಯದವರೆಗೂ ಇರುತ್ತದೆ. (ಸಾಮಾನ್ಯವಾಗಿ ಋತುಚಕ್ರವು 40 ವರ್ಷಗಳ ನಂತರ ನಿಲ್ಲುತ್ತದೆ)

ಗರ್ಭಿಣಿಯಾಗಿರುವಾಗ ಭ್ರೂಣಾವಸ್ಥೆಗೆ ಬಂದಿರುವ ಕೋಶವು ಗರ್ಭಕೋಶದ ಒಳಗಿನ ಪೊರೆಗೆ ಅಂಟಿಕೊಂಡಿರುತ್ತದೆ. ಅದನ್ನು ಎಂಡೋಮೆಟ್ರಿಯಂ ಎಂದು ಕರೆಯುತ್ತಾರೆ. ಇನ್ನೂ ಗರ್ಭಿಣಿಯಿಲ್ಲದ ಸಂದರ್ಭದಲ್ಲಿ ಎಂಡೋಮೆಟ್ರಿಯಲ್ ಪೊರೆ ಹರಿದು ಹೋಗುತ್ತದೆ ಮತ್ತು ಯೋನಿಯ ಮೂಲಕ ರಕ್ತಸ್ರಾವ ಆಗುತ್ತದೆ.




## ಎಂಡೊಮೆಟ್ರಿಯೊಸಿಸ್ ಎಂದರೇನು ?

ಎಂಡೋಮೆಟ್ರಿಯೊಸಿಸ್ ಸಂದರ್ಭದಲ್ಲಿ ಗರ್ಭಾಶಯದ ಒಳಗಿನ ಪೊರೆಯನ್ನು *ಹೋಲುವ* ಅಂಗಾಂಶ, ಬೇರೆ ಬೇರೆ ಜಾಗಗಳಲ್ಲಿ ಬೆಳವಣಿಗೆ ಆಗುತ್ತದೆ. ಅವುಗಳೆಂದರೆ ಅಂಡನಾಳಗಳು, ಅಂಗಾಂಶಗಳು, ಅಂಡಾಶಯಗಳು ಮತ್ತು ಗರ್ಭಕೋಶದ ಆಸ್ಥಿಗಚ್ಚುಗಳು ಮತ್ತು ಇವು ಮೂತ್ರಕೋಶ, ಕರುಳು ಹಾಗೂ ಅಪೆಂಡಿಕ್ಸ್‌ಗಳಿಗೂ ಹರಡಬಹುದು (Johnson etal.,2017).

## ಎಂಡೊಮೆಟ್ರಿಯೊಸಿಸ್ ನಲ್ಲಿ ಏನಾಗುತ್ತದೆ

ಗರ್ಭಾಶಯದ ಹೊರಗೆ ಬೆಳೆಯುವ ಎಂಡೊಮೆಟ್ರಿಯೊಟಿಕ್ ಅಂಗಾಂಶದಿಂದ ಮುಟ್ಟಿನ ಅವಧಿಯಲ್ಲಿ ಪ್ರತಿ ತಿಂಗಳು ರಕ್ತಸ್ರಾವವಾಗುತ್ತದೆ. ದೇಹದಿಂದ ಹೊರಬರಲು ರಕ್ತಕ್ಕೆ ಯಾವುದೇ ಮಾರ್ಗವಿಲ್ಲ. ಆದ್ದರಿಂದ ಇದು ಈ ತಾಣಗಳಲ್ಲಿ ಸಂಗ್ರಹಗೊಳ್ಳಲು ಪ್ರಾರಂಭಿಸುತ್ತದೆ ಮತ್ತು ನೆರೆಯ ಅಂಗಾಂಶಗಳು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುತ್ತದೆ. ಇದು ಶ್ರೋಣಿಯ ಪ್ರದೇಶದಲ್ಲಿನ ಅಂಗಗಳ ಹಾನಿಗೆ ಕಾರಣವಾಗುತ್ತದೆ.

## ಎಂಡೊಮೆಟ್ರಿಯೊಸಿಸ್ ಎಷ್ಟು ಸಾಮಾನ್ಯವಾಗಿದೆ

ಎಂಡೊಮೆಟ್ರಿಯೊಸಿಸ್ ಯಾವುದೇ ಜನಸಂಖ್ಯೆಯಲ್ಲಿ ಸಂತಾನೋತ್ಪತ್ತಿ ವಯಸ್ಸಿನ ಸುಮಾರು 10% ಮಹಿಳೆಯರ ಮೇಲೆ ಪರಿಣಾಮ ಬೀರುತ್ತದೆ.



## ಲಕ್ಷಣಗಳು




## ಎಂಡೊಮೆಟ್ರಿಯೊಸಿಸ್‌ಗೆ ಕಾರಣವೇನು ?

ಎಂಡೊಮೆಟ್ರಿಯೊಸಿಸ್‌ನ ನಿಖರವಾದ ಕಾರಣ ಇನ್ನೂ ತಿಳಿದಿಲ್ಲ. ಎಂಡೊಮೆಟ್ರಿಯೊಸಿಸ್‌ನ ಕಾರಣಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಯನಗಳನ್ನು ನಡೆಸಲಾಗುತ್ತಿದೆ. ಎಂಡೊಮೆಟ್ರಿಯೊಸಿಸ್‌ನ ಸಂಭವನೀಯ ಕಾರಣಗಳು ಈ ಕೆಳಗಿನಂತಿವೆ




## ರೋಗನಿರ್ಣಯ

ಎಂಡೊಮೆಟ್ರಿಯೊಸಿಸ್ ರೋಗನಿರ್ಣಯಕ್ಕೆ ಸರಳ ರಕ್ತ ಪರೀಕ್ಷೆ ಇಲ್ಲ. ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಎಂಡೊಮೆಟ್ರಿಯೊಸಿಸ್ ರೋಗನಿರ್ಣಯಕ್ಕೆ ಉತ್ತಮ ಮಾನದಂಡ ಹಾಗೂ ಹಿಸ್ಟೋಲಾಜಿಕಲ್ ದೃಢೀಕರಣವಾಗಿದೆ.



## ಎಂಡೊಮೆಟ್ರಿಯೊಸಿಸ್ ನಿರ್ವಹಣೆ

ಯಾವುದೇ ಶಾಶ್ವತ ಚಿಕಿತ್ಸೆ ಇಲ್ಲವಾದರೂ, ರೋಗ ಲಕ್ಷಣಗಳಿಂದ ಪರಿಹಾರ ಪಡೆಯಲು ಮಹಿಳೆಯರಿಗೆ ಶಸ್ತ್ರಚಿಕಿತ್ಸೆ – ಅಥವಾ ವೈದ್ಯಕೀಯ ಚಿಕಿತ್ಸೆ ಪ್ರಯೋಜನ ಪಡೆಯಬಹುದು.




**ಆದಾಗ್ಯೂ, 5 ಮಹಿಳೆಯರಲ್ಲಿ ಒಬ್ಬರಿಗೆ ರೋಗಲಕ್ಷಣಗಳು ಮರುಕಳಿಸಬಹುದು**